ಶ್ರೀ ಎಂ. ವಿ. ಕೃಷ್ಣಪ್ಪ.—ಕಣ್ಣಾವ್ಜಿರಾಶಯದ ಕೆಳಗಡೆ ಮುಳುಗಡೆ ಆದ ಜಮೀನಿನ ರೈತರನ್ನು ರೀಹ್ಯಾಬಿಲಿಟೇಟ್ ಮಾಡಿರುವುದು ನಿಜ. ಆ ಗ್ರಾಮಗಳಲ್ಲಿ ಪಕ್ಕಾ ಪೋಡಿ ಕೆಲಸ ಮುಗಿಯದೆ, ರೈತರಿಗೆ ತೊಂದರೆಯಾಗಿದೆ. ಸರ್ಕಾರದವರು ಆದಷ್ಟು ಬೇಗ ಅದನ್ನು ಮಾಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದು ಬೇಗ ಮುಗಿಸಿ ಎಂದು ಹೇಳುತ್ತೇನೆ.

ಶ್ರೀ ಟಿ. ಮಾದಯ್ಯಗೌಡ.—ಬೇಗ ಅದನ್ನು ರೆಗ್ಯುಲರೈಸ್ ಮಾಡುವುದರಿಂದ, ಸ್ಥಳದ ಅಧಿಕಾರಿಗಳಿಗೆ ಸರಿಯಾದ ವರ್ತಮಾನ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಸರ್ಕಾರದವರು ಏನು ಮಾಡಿದರೂ ಅವರು ಅಡ್ಡಿಆತಂಕ ತರುತ್ತಾ ಇದ್ದಾರೆ. ಈ ಕಾರಣದಿಂದ ರೆಗ್ಯುಲರೈಸ್ ಆಗಿಲ್ಲ ಎನ್ನುವುದನ್ನು ಸರ್ಕಾರದವರು ಮನಗಂಡು ಯಾವುದಾದರೂ ನಿಗದಿಯಾದ ಅವಧಿಯಲ್ಲಿ ಪೂರ್ತಿ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಈಗತಾನೇ ರೆವಿನ್ಯೂ ಸಚಿವರು ಹೇಳಿದರು, ಕಣ್ವಾ ಕೆರೆ ಕಟ್ಟಿರುವುದರಿಂದ ಮುಳುಗಡೆ ಪ್ರದೇಶದ ರೈತರನ್ನು ರೀಹ್ಯಾಬಿಲಿಟೇಷನ್ ಮಾಡಿದ್ದೇವೆ ಎಂದು. ಕೆರೆ ಕಟ್ಟಿ 30 ವರ್ಷ ಆದರೂ ಹಿಂದಿನ ರೈತರಿಗೆ ಅನುಕೂಲ ಮಾಡಿಕೊಡುತ್ತ ಇದ್ದೀರಿ. ಮುಳುಗಡೆ ಆದ ಜಯಪುರ ವ.ತು, ವಿಜಾಪುರ ಪ್ರದೇಶದ ಅನೇಕ ರೈತರು ನಿರ್ಗತಿಕರಾಗಿದ್ದಾರೆ. ಆ ಸ್ಥಳದ ಅಧಿಕಾರಿಗಳು ಪರಿಶೀಲನೆ ಮಾಡಿ ಕಷ್ಟಸುಖ ಆರೋಚನೆ ಮಾಡದೆ ತೊಂದರೆಯಾಗುತ್ತಾ ಇರುವುದು ಶೋಚನೀಯ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ—ನಿಜವಾಗಿ ಜಮೀನು ಕಳೆದುಕೊಂಡಿರುವ ರೈತರಿಗೆ ಆ ರೀತಿ ತೊಂದರೆ ಆಗಬಾರದು. ಸಾಧ್ಯವಾದಷ್ಟು ಬೇಗ, ಪಕ್ಕ ಪೋಡಿ ಮಾಡಿಸಿ ರೈತರಿಗೆ ಸಾಗುವಳಿ ಚೀಟಿ ಕೊಟ್ಟು ಮುಂದೆ ತೊಂದರೆ ಇಲ್ಲದ ಹಾಗೆ ಪ್ರಯತ್ನ ಪಡುತ್ತೇನೆ.

ಶ್ರೀ ಜಿ. ಟಿ. ರಂಗಪ್ಪ.—ಮುಳುಗಡೆ ಆದ ಪ್ರದೇಶದ ರೈತರಿಗೆ ಜಮೀನು ಇಲ್ಲದವರಿಗೆ ಜಮೀನು ಕೊಟ್ಟಿದ್ದೀರಿ, ಮನೆಗಳನ್ನು ಕಳೆದುಕೊಂಡವರಿಗೆ, ಮನೆ ಕಟ್ಟಿಕೊಟ್ಟಿದ್ದೀರಿ. ಆದರೆ ಜಮೀನು ಇಲ್ಲದ ವ್ಯವಸಾಯಗಾರರಿಗೆ ಯಾವುದೂ ಕೊಟ್ಟಿಲ್ಲ. ಆ ಸ್ಥಳಕ್ಕೆ ತಾವು ಭೇಟಿ ಕೊಟ್ಟು ಅವರ ಕಷ್ಟ ಸುಖಗಳನ್ನು ವಿಚಾರ ಮಾಡಿ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭೇಟಿ ಕೊಡುವ ಭರವಸೆ ಕೊಡುತ್ತೇನೆ. ಅಸೆಂಬ್ಲಿ ಆದ ತಕ್ಷಣ 6 ನೇ ತಾರೀಖು ನಿಮ್ಮ ಊರಿಗೆ ಬರಬೇಕು ಎಂದು ಕೇಳಿಕೊಂಡಿದ್ದಾರೆ. ಮಧ್ಯಾಹ್ನ ಬೇಕಾದರೆ ನೋಡಿಕೊಂಡು ಬರೋಣ.

———

Electrical Pump Sets given on Hire Purchase basis.

*Q.—456. Sri A. J. DODDAMETI (Ron).—

Will the Government be pleased to state :—

the number of electrical pump sets that have been given by the Government to the ryots on hire purchase basis in Dharwar District during the years 1963-64, 1964-65 and 1965-66, (Taluk wise information may be supplied).

A.—Sri VEERENDRA PATIL (Minister for Public Works).—

Vide Statement appended.

Talukwise and Yearwise break-up figures in respect of Pumpsets issued on Hire-Purchase System in Dharwar District.

Sl. No.	Name of Taluk		Electrical Pumpsets Issued			
			1963-64	1964-65	1965-66 to end of February 1966.	Total
1	Ron	...	24	15	1	40
2	Hubli	...	2	4	...	6
3	Gadag	...	3	...	2	5
4	Kalghatgi	...	1	1	...	2
5	Kundagol	...	...	3	...	3
6	Navalgund	...	...	...	1	1
7	Hangal	...	1	1	...	2
8	Shiggaon	...	27	9	15	51
9	Ranebennur	...	32	18	20	70
10	Byadgi	...	...	1	1	2
11	Hirekerur	...	...	6	1	7
12	Haveri	...	32	15	5	52
			122	73	46	241

ಶ್ರೀ ಎ. ಜೆ. ದೊಡ್ಡಮೇಟಿ.—ಪಂಪುಸೆಟ್ಟುಗಳ ಬೇಡಿಕೆಗೆ ಅರ್ಜಿ ಬಂದದ್ದು ಎಷ್ಟು ?

ಶ್ರೀ ವೀರೇಂದ್ರ ಪಾಟೀರ್.—ಆ ಇನ್‌ಫರ್ಮೇಷನ್ ನನ್ನ ಹತ್ತಿರ ಇಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—1965-66ನೇ ಸಾಲಿನಲ್ಲಿ ಬಹಳ ಕಡಿಮೆಯಾಗಿ ಪಂಪುಸೆಟ್ಟು ಒದಗಿಸಿದ್ದೀರಿ. ರೋಣಗೆ 1, ಗದಗ್‌ಗೆ 2, ನವಲ್‌ಗುಂದಗೆ 1; ನನಗೆ ಬಂದ ಇನ್‌ಫರ್ಮೇಷನ್ ಪ್ರಕಾರ ಬಹಳ ಜನರು ಅರ್ಜಿ ಸಲ್ಲಿಸಿದ್ದಾರೆ. ಸರ್ಕಾರದ ಖಾತೆಯವರು ಅವರ ಬೇಡಿಕೆ ಪೂರೈಸಲಿಕ್ಕೆ ಅನೇಕ ರೀತಿಯಿಂದ ಅಡ್ಡಿ ಆತಂಕಗಳನ್ನು ಮತ್ತು ಕೆಂಪು ಪತ್ರಗಳನ್ನು ಒಡ್ಡುತ್ತಾ ಇದ್ದಾರೆ. ಆ ಕಾರಣಕ್ಕಾಗಿ 1960-61ನೇ ಸಾಲಿನಲ್ಲಿ ಪಂಪುಸೆಟ್ಟುಗಳ ಹಂಚಿಕೆ ಬಹಳ ಕಡಿಮೆ ಯಾಗಿದೆ. ಹೀಗೆ ಅನೇಕ ತಕರಾರುಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ಹೇಗೆ ?

ಶ್ರೀ ವೀರೇಂದ್ರ ಪಾಟೀರ್.—ಹೈರ್ ಪರ್ಚೇಸ್‌ಗೆ ಬೇಕಾದಷ್ಟು ಮಾಡಿಲ್ಲ. ಪಂಪುಸೆಟ್ಟುಗಳು ಕೊಡುವುದಕ್ಕೆ ಅಗ್ರಿಕರ್‌ಚರರ್ ಡಿಪಾರ್ಟ್‌ಮೆಂಟ್‌ನವರು ಸ್ಯಾಂಕ್ಷನ್ ಮಾಡಿದ ಮೇರೆ ಎಲೆಕ್ಟ್ರಿಸಿಟಿ ಬೋರ್ಡಿನವರು ಸಪ್ಲೈ ಮಾಡಿ ಸರ್ವಿಸ್ ಮಾಡುವುದು. ಪಂಪುಸೆಟ್ಟು ಕೊಡುವ ಮುನ್ನ, ಡಿವಿಷನ್‌ಮೈಸ್ ಅರಾಟ್ ಮಾಡುತ್ತಾರೆ. ಅಪ್ಲಿಕೇಷನ್ ಎಷ್ಟು ಇದೆ; ನಮೀಪದಲ್ಲಿ ಲೈನು ಇದೆಯೇ ಇಲ್ಲವೇ ನೋಡಿಕೊಂಡು ದುಡ್ಡು ಎಷ್ಟು ಕೊಟ್ಟಿರುತ್ತಾರೋ, ಅಷ್ಟರಮಟ್ಟಿಗೆ ಪಂಪು ಸೆಟ್ಟುಗಳು ಸಪ್ಲೈ ಮಾಡಿ ಸರ್ವಿಸ್ ಮಾಡಿರುತ್ತಾರೆ. ದುಡ್ಡು ಕಡಿಮೆ ಕೊಟ್ಟಿರಬಹುದು. ಅದಕ್ಕೋಸ್ಕರ ಕಡಿಮೆ ಪಂಪುಸೆಟ್ಟುಗಳು ಸಪ್ಲೈ ಮಾಡಲಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಧಾರವಾಡ ತಾಲ್ಲೂಕಿನಲ್ಲಿ ಮುಂದರಗಿ, ಶಿರಹಟ್ಟಿ, ನರ್ಗುಂದ್ ಭಾಗದಲ್ಲಿ ರೈತರಿಗೆ ಪಂಪುಸೆಟ್ಟುಗಳನ್ನು ಕೊಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ವೀರೇಂದ್ರ ಪಾಟೀರ್.—ಪಂಪುಸೆಟ್ಟುಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಹಂಚುವುದಕ್ಕೆ ಆಗುವುದಿಲ್ಲ. ಸಮೀಪದಲ್ಲಿ ಲೈನ್ ಹೋಗಿದೆಯೇ ಇಲ್ಲವೇ, ಪಂಪುಸೆಟ್ಟು ಕೊಟ್ಟಮೇಲೆ ಸರ್ವಿಸ್ ಮಾಡುವುದಕ್ಕೆ ಅನುಕೂಲ ಇದೆಯೇ ಇಲ್ಲವೇ ಎಂದು ನೋಡಿಕೊಂಡು ಕೊಡಬೇಕು.

ಶ್ರೀ ಎ. ಜೆ. ದೊಡ್ಡಮೇಟಿ.—ಲಸ್ಟ್ ನೋಡಿದರೆ ನಾಲ್ಕು ತಾಲ್ಲೂಕುಗಳಲ್ಲಿ ಕೊಟ್ಟಿಲ್ಲ. ಇವು ಮರೆತು ಉಳಿದವೋ ಹೇಗೆ ?

ಶ್ರೀ ವೀರೇಂದ್ರ ಪಾಟೀರ್.—ಸರ್ಕಾರದವರು ಅಲ್ಲಯ ಅಧಿಕಾರಿಗಳಿಗೆ ಒಂದು ಆದೇಶ ಕಳಿಸುತ್ತಾರೆ. ಏಳಂಬ ಆಗದ ರೀತಿಯೊಳಗೆ ಎಷ್ಟೆಷ್ಟು ಅಲ್ಲಿ ಅರ್ಜಿ ಇವೆಯೋ ಅದನ್ನು ವಿಲೇವಾರಿ ಮಾಡಿ ಬೇಗನೆ ಪಂಪುಸೆಟ್ಟು ಕೊಡುವುದಕ್ಕೆ ಸರ್ಕಾರ ನಿರ್ದಿಷ್ಟ ಸೂಚನೆ ಕೊಡುತ್ತೇವೆ. ಮೊದಲು ಪಂಪುಸೆಟ್ಟು ಕೊಡುವುದಕ್ಕೆ 13 ಸ್ಟೆಪ್ಸ್ ಇದ್ದುವು. ಈಗ ಎಲೆಕ್ಟ್ರಿಕರ್ ಇಂಜಿನಿಯರು ಮತ್ತು ತಾಸೀರ್ದಾರ್‌ರಿಂದ ಬಂದಮೇಲೆ ಇಷ್ಯೂ ಮಾಡುವಂತೆ ಮಾಡಿದ್ದೇವೆ. ಅಪ್ಲಿಕೇಷನ್ ಬಂದ ಕೂಡಲೇ ಪ್ರೊಸೀಸ್ ಮಾಡುವುದಕ್ಕೆ ತಡವಾಗುವುದಿಲ್ಲ. ಎಷ್ಟುಮಟ್ಟಿಗೆ ದುಡ್ಡು ಸಿಕ್ಕುತ್ತದೋ ಅಷ್ಟೇ ಅಪ್ಲಿಕೇಷನ್ ಸ್ಯಾಂಕ್ಷನ್ ಮಾಡಿ, ಎಲೆಕ್ಟ್ರಿಕ್ ಪಂಪುಸೆಟ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕೆಲವು ನಿಯಮಗಳನ್ನು ಶಿಥಿಲತೆ ಮಾಡಿದ ಮೇಲೆ ಪಂಪುಸೆಟ್ಟು ಕೊಟ್ಟಿರುವುದು ಕಡಿಮೆಯಾಗಿದೆ. ನಿಯಮಗಳು ಬಿಗಿ ಇದ್ದಾಗ 172-175 ಹೀಗೆ ಕೊಟ್ಟಿದ್ದಾರೆ. ಶಿಥಿಲತೆ ಆದಮೇಲೆ 46 ಪಂಪು ಸೆಟ್ಟು ಆಗಿವೆ. ಇತೀ ಜಿಲ್ಲೆಯೊಳಗೆ, ಶಿಥಿಲತೆ ಮಾಡಬೇ ಇರುವುದರೊಳಗೆ 122 ಆಗಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಶ್ರೀ ಶಿದ್ದಯ್ಯ ಕಾಶೀಮಠ್.—ಬರಗಾಲಕ್ಕೆ ತುತ್ತಾದ ಮುಂದರಗಿ, ಶಿರಹಟ್ಟಿ, ನರಗುಂದ ಭಾಗದಲ್ಲಿ ಈಗಾಗಲೇ ವಿದ್ಯುಚ್ಛಕ್ತಿ ಬಂದು ನದಿ ಹಳ್ಳಗಳು ಇರುವುದರಿಂದ, ಆದಷ್ಟು ಆದ್ಯತೆ ಕೊಟ್ಟು ಕ್ಷಿಪ್ರದಲ್ಲಿಯೇ ಪಂಪುಸೆಟ್ಟುಗಳನ್ನು ಒದಗಿಸುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್.—ಇದರಲ್ಲಿ ಎರಡು ವಿಚಾರ ಇದೆ. ಹೈರ್ ಪರ್ಚೇಸ್ ಮೇಲೆ ಪಡೆಯಬೇಕು ಎಂದರೆ, ಅಗ್ರಿಕರ್‌ಚರರ್ ಡಿಪಾರ್ಟ್‌ಮೆಂಟಿನವರು ಸ್ಯಾಂಕ್ಷನ್ ಮಾಡಬೇಕು, ಪಂಪುಸೆಟ್ ತೆಗೆದುಕೊಳ್ಳಬೇಕು. ಪ್ರತಿಯೊಬ್ಬರೂ ಹೈರ್ ಪರ್ಚೇಸ್ ಮೇಲೆ ಪಂಪುಸೆಟ್ಟುಗಳನ್ನು ಪಡೆದುಕೊಂಡು ಸರ್ವಿಸ್ ಮಾಡಬೇಕು ಎಂದು ಆಸೆ ಮಾಡಿದರೆ ಅಷ್ಟು ಪ್ರಮಾಣದಲ್ಲಿ ಕೆಲಸಕಾರ್ಯಗಳು ಆಗಬೇಕು ಎಂದರೆ ಆಸೆಪಟ್ಟಂತೆ ಕೆಲಸ ಆಗುವುದಿಲ್ಲ. ಎಲ್ಲೆಲ್ಲಿ ರೈತರು ಪಂಪುಸೆಟ್ಟುಗಳನ್ನು ಖರೀದಿಗೆ ತೆಗೆದುಕೊಂಡು ಆ ಪಂಪುಸೆಟ್ಟುಗಳಿಗೆ ಮನೆ ಕಟ್ಟಿಕೊಂಡರೆ ಸರ್ವಿಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲರೂ ಸರ್ಕಾರದವರು ಮಾಡಬೇಕೆಂದರೆ, ದುಡ್ಡು ಇದ್ದ ಪ್ರಕಾರ, ಕೆಲಸ ಕಾರ್ಯಗಳು ಆಗುತ್ತವೆ. ಹೆಚ್ಚಿನಮಟ್ಟಿಗೆ ಹೈರ್ ಪರ್ಚೇಸ್ ಸಿಕ್ಕಬೇಕು ಎಂದು ಆಸೆಮಾಡಲಾರದೆ ರೈತರೇ ಮುಂದೆ ಬಂದು ನಾವೇ ಪಂಪುಸೆಟ್ಟುಗಳನ್ನು ತೆಗೆದುಕೊಳ್ಳುತ್ತೇವೆ, ಸರ್ವಿಸ್ ಮಾಡಿ ಎಂದರೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Mr. SPEAKER.—If the procedure has been facilitated and made easy, would the Government explain the shortfall in the number of pumpsets that have been serviced ? That is what Sri A. J. Doddameti wants to know.

9-00 A.M.

ಶ್ರೀ ವೀರೇಂದ್ರ ಪಾಟೀರ್.—ನಾನು ಹೇಳಿದೆ; ಪಂಪ್ ಸೆಟ್ ಸ್ಯಾಂಕ್ಷನ್ ಮಾಡುವುದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್. ಸ್ಯಾಂಕ್ಷನ್ ಆದಮೇಲೆ ಇಷ್ಯೂ ಮಾಡುವುದು ಇಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್. ಎರಡೂ ಡಿಪಾರ್ಟ್‌ಮೆಂಟಿಗೂ ಸಂಬಂಧವಿದೆ. ಸ್ಯಾಂಕ್ಷನ್ ಆದಮೇಲೆ ಸರ್ವಿಸ್ ಆಗಬೇಕಾದುದು. ಸ್ಯಾಂಕ್ಷನ್ ಮಾಡುವುದರಲ್ಲಿ ಪ್ರೊಸೀಜರ್ ಸಿಂಪ್ಲಿಫೈ ಮಾಡಿದ್ದಾರೆ. ಮೊದಲು 122-73 ಈ ರೀತಿ ಮಾಡಿದ್ದಾರೆ ಎಂದು ಹೇಳಿದರೆ ಬಹುಶಃ ಪೆಂಡಿಂಗ್ ಅಪ್ಲಿಕೇಶನ್ಸ್ ಇರಬಹುದು. ಆ ರೀತಿ ಇಷ್ಯೂಮಾಡಿ ಸರ್ವಿಸಿಂಗ್ ಮಾಡಿರಬಹುದು. 46 ಬಂದಿದ್ದರೆ ಬಹುಶಃ ಅಲ್ಲಿ ದುಡ್ಡು ಕಡಮೆ ಸಿಕ್ಕಿರಬಹುದು. ಇದರಿಂದ 46 ಏತಕ್ಕೆ ಆಗಿದೆ ಯಾವ ಕಾರಣಕ್ಕೆ ಎಂದು ಹೇಳುವುದಕ್ಕಾಗುವುದಿಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಮಾಹಿತಿ ಕೊಡುತ್ತೇನೆ.

Mr. SPEAKER.—I wanted to mention one thing that was in my mind. Members are entitled to elicit information from the Government. If the Hon'ble Minister were to say it is not my portfolio or it relates to another Department, that would be an unsatisfactory answer. The Government, have to co-ordinate themselves. If a topic relates to more than one Department, the Hon'ble Minister must consult his colleagues and do something. I am thinking how to adjust it. I have seen it more than once said that the question has been referred to another Department. If member asks them for explanation why replies have not been received, they say that it does not refer to them, and therefore they have sent it back. It may be because of adjustment and distribution of portfolios or it may be a topic which concerns more than one Department. All that must be co-ordinated before it comes on the floor of the House. The Government, as far as possible must co-ordinate and give the fullest answer becausr Government is one unit and for the purpose of work alone, it is divided. I will also consult the Ministers as well as the Members of the Opposition and try to co-ordinate.

ಶ್ರೀ ಎ. ಜೆ. ದೊಡ್ಡಮೇಟಿ.— ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದರಲ್ಲ ಎಷ್ಟು ಅರ್ಜಿಗಳು ಬಂದಿವೆ ಎಂದರೆ ಮಾಹಿತಿ ಇಲ್ಲ ಎಂದು ಹೇಳಿದರು. ಏಕೆ ಕಮ್ಮಿಯಾಗಿದೆಂದು ಕೇಳಿದರೆ ಹೇಳುವುದಕ್ಕಾಗುವುದಿಲ್ಲ ಎಂದರು. ಹೀಗಾಗಿ ಪ್ರಶ್ನೆಯ ಮೂಲ ನಿಜವಾಗಿ ಉಪಪ್ರಶ್ನೆಯಾಗುತ್ತದೆ. ಯಾರಾದರೂ ಮಾಹಿತಿ ತರಿಸಬಹುದಿತ್ತು. ಇದರಿಂದ ಪ್ರಶ್ನೆ ಹೋಲ್ಡ್ ಓವರ್ ಮಾಡಿ ಮಾಹಿತಿ ತರಿಸುವುದು ಸೂಕ್ತ. ಇನ್ನೊಂದು ಪ್ರಶ್ನೆ ಕೇಳುವುದರೊಳಗೆ ನಮ್ಮ ಅಧಿಕಾರ ಮುಗಿಯುತ್ತದೆ.

Sri VEERENDRA PATIL.—If the Hon'ble Member is not satisfied with the information that is furnished, I have no objection to the question being held over.

Mr. SPEAKER.—I have been carefully watching every question that is coming up before the House. With regard to rural electrification, number of pumpsets, several questions are frequently coming. I would rather consolidate all of them and have them taken up on one day because the same answer is repeated since one schedule is there all over the State and the same schedule comes up in answer. So, all the allied questions may be put together. I will hold over this question of Sri A. J. Dodmeti.

Rural Electrification Programme.

*Q.—467. Sri H. D. DEVE GOWDA (Holenarasipur).—

Will the Government be pleased to state :—

(*a*) the number of villages electrified under Rural Electrification Programme in Holenarasipur Taluk since 1962 up to date ;

(*b*) the number of villages for which estimates are ready to take up the electrification work ;

(*c*) the amount required to complete the same ;

(*d*) whether they would provide the required amount at least in the year 1966-67 ?